ಕರ್ನಾಟಕ ಸರ್ಕಾರ

**ಉಪ ನಿರ್ದೇಶಕರ ಕಛೇರಿ**

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,**

9ನೇ ಕ್ರಾಸ್, ಕೆ.ಆರ್. ಪುರಂ ಹಾಸನ – 573 201.

E-mail: ddwcdhassan@gmail.com Phone No: 08172-267218, 23[illegible]

Fax No: 08172-268[illegible]76

---

ಸಂಖ್ಯೆ:ಉನಿಹಾ/ಐಸಿಡಿಎಸ್/ಅಂ.ಕಾ.ಸ.ಅಧೀ/2021-22 ದಿನಾಂಕ: 13.09.2021

**ಇವರಿಗೆ,**
ಜಿಲ್ಲಾ ಮಾಹಿತಿ ಅಧಿಕಾರಿಗಳು,
ಜಿಲ್ಲಾ ಪಂಚಾಯತ್,
ಹಾಸನ.

**ಮಾನ್ಯರೆ,**

**ವಿಷಯ :**–ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲು ಎನ್.ಐ.ಸಿ ತಂತ್ರಾಂಶದಲ್ಲಿ ಅಳವಡಿಸುವ ಕುರಿತು.

**************

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹಾಸನ ಜಿಲ್ಲೆಯ ಖಾಲಿ ಇರುವ 7 ಅಂಗನವಾಡಿ ಕಾರ್ಯಕರ್ತೆ ಮತ್ತು 24 ಅಂಗನವಾಡಿ ಸಹಾಯಕಿ ಹುದ್ದೆಗಳನ್ನು ಭರ್ತಿಮಾಡಲು ಆನ್‌ಲೈನ್ ಮೂಲಕ ಅಧಿಸೂಚನೆಯನ್ನು ಎನ್.ಐ.ಸಿ ತಂತ್ರಾಂಶದಲ್ಲಿ ಅಳವಡಿಸಲು ಮತ್ತು ಸದರಿ ಕಾರ್ಯಕರ್ತೆ/ಸಹಾಯಕಿ ಅರ್ಜಿಗಳನ್ನು ಆಹ್ವಾನಿಸಲು ದಿನಾಂಕ:14.09.2021 ರಂದು ಗಂಟೆ:10.00 ರಿಂದ ವೆಬ್‌ಸೈಟ್ ನಲ್ಲಿ ಅರ್ಜಿ ಅಪ್‌ಲೋಡ್ ಮಾಡಲು ಅವಕಾಶ ಮಾಡಲು ತಮ್ಮಲ್ಲಿ ಈ ಮೂಲಕ ಕೋರಿದೆ. ಹಾಗೆಯೇ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:13.10.2021 ಮಧ್ಯಾಹ್ನ ಗಂಟೆ5.30 ಆಗಿದ್ದು, ಸದರಿ ಮಾಹಿತಿಯನ್ನು ಎನ್ಐಸಿ ತಂತ್ರಾಂಶದಲ್ಲಿ ಅಳವಡಿಸಲು ತಮ್ಮಲ್ಲಿ ಈ ಮೂಲಕ ಕೋರುತ್ತಾ ಅಧಿಸೂಚನೆಗೆ ಖಾಲಿ ಇರುವ ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಹಾಸನ.

ಕರ್ನಾಟಕ ಸರ್ಕಾರ

**ಉಪ ನಿರ್ದೇಶಕರ ಕಛೇರಿ**

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**

೯ನೇ ಕ್ರಾಸ್, ಕೆ.ಆರ್. ಪುರಂ, ಹಾಸನ – 573 201.

**E-mail: ddwcdhassan@gmail.com** **Phone No: 08172-267218, 235133**
**Fax No: 08172-268976**

ಸಂಖ್ಯೆ: ಉನಿಹಾ/ಐಸಿಡಿ/ಅಂ.ಕಾ.ಕರ್ತೆ/ಅಂ.ಸಹಾಯಕಿ/2021-22 ದಿನಾಂಕ:14.09.2021

## ಅಧಿಸೂಚನೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಜಿಲ್ಲೆಯ 8 ತಾಲ್ಲೂಕುಗಳ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ 7 ಅಂಗನವಾಡಿ ಕಾರ್ಯಕರ್ತೆಯರು ಮತ್ತು 24 ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಆದೇಶ ಸಂಖ್ಯೆ:ಮಮಇ/303/ಐಸಿಡಿ/2017/ದಿನಾಂಕ:23.09.2017 ಮತ್ತು ತಿದ್ದುಪಡಿ ಆದೇಶ ಸಂಖ್ಯೆ:ಮಮಇ:152:ಐಸಿಡಿ:2021/ದಿನಾಂಕ:01.06.2021 ಮತ್ತು ಪ್ರಧಾನ ಕಛೇರಿ ಪತ್ರ ಸಂಖ್ಯೆ:ಡಿಡಬ್ಲ್ಯೂಸಿ:ಐಸಿಡಿ:ಎಎನ್‌ಜೆ-1:44:2017-18/ದಿನಾಂಕ:29.12.2017ರ ಆದೇಶ ಮತ್ತು ಮಾರ್ಗಸೂಚಿ ಪ್ರಕಾರ ಗೌರವಧನ ಸೇವೆಯ ಆಧಾರದಲ್ಲಿ ನೇಮಕ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಈ ಸಂಬಂಧ ಹೆಚ್ಚಿನ ವಿವರಗಳಿಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಛೇರಿಗಳಲ್ಲಿ ಮಾಹಿತಿ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ದಿನಾಂಕ:14.09.2021 ರಿಂದ ಕೊನೆಯ ದಿನಾಂಕ:13.10.2021 ಗಂಟೆ:5.30 ಆಗಿದ್ದು, ವೆಬ್ ಸೈಟ್ ವಿಳಾಸ: www.anganawadirecruit.kar.nic.in ರಲ್ಲಿ ನೋಡಬಹುದು.

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಹಾಸನ.

# CALENDAR FOR EVENTS

**ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ನೇಮಕಾತಿ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.**

| WEBSITE: ವಿಳಾಸ | **www.anganawadirecruit.kar.nic.in** |
|---|---|

**ತಾತ್ಕಾಲಿಕ ವೇಳಾ ಪಟ್ಟಿ**

| ವಿವರಣೆ | ದಿನಾಂಕ |
|---|---|
| ಆನ್‌ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ | 14.09.2021, 10:00 ಗಂಟೆಯಿಂದ |
| ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 13.10.2021, 5:30 ಗಂಟೆಯವರೆಗೆ |
| ಆಯ್ಕೆ ಸಮಿತಿ ಸದಸ್ಯರು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಎನ್.ಐ.ಸಿ ಯಲ್ಲಿ ಸ್ವೀಕರಿಸಲಾದ ಅರ್ಜಿಗಳ ಪರಿಶೀಲನೆ | 28.10.2021 |
| ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಆಯ್ಕೆ ಸಮಿತಿಯಿಂದ ಅನುಮೋದನೆ ಪಡೆಯುವುದು. | ಮಾನ್ಯ ಜಿಲ್ಲಾಧಿಕಾರಿಗಳು ನಿಗಧಿಪಡಿಸುವ ದಿನಾಂಕಕ್ಕನುಗುಣವಾಗಿ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. |
| ಆಯ್ಕೆಯಾದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಣೆ ಹಾಗೂ ಸಾರ್ವಜನಿಕ ಆಕ್ಷೇಪಣೆ ಸಲ್ಲಿಸುವಿಕೆಗೆ ಕಾಲಾವಕಾಶ | |
| ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವುದು. | |

ತಮ್ಮ ವಿಶ್ವಾಸಿ,

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಹಾಸನ.

**<u>ಕಾರ್ಯಕರ್ತೆ ಹುದ್ದೆಗೆ ಆನ್ ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು:-</u>**

1. ಅರ್ಜಿ ನಿಗಧಿತ ನಮೂನೆಯಲ್ಲಿ. (ಆನ್‌ಲೈನ್‌ನಲ್ಲಿ)
2. ವಯೋಮಿತಿ 18 ರಿಂದ 35 ವರ್ಷ (ಈ ಅಧಿಸೂಚನೆಯ ಕೊನೆಯ ದಿನಾಂಕಕ್ಕೆ 35 ವರ್ಷ ಮೀರಿರಬಾರದು, ಮತ್ತು ವಿಕಲಚೇತನ ಅಭ್ಯರ್ಥಿಗಳಿಗೆ 10 ವರ್ಷ ವಯೋಮಿತಿಯಲ್ಲಿ ಸಡಿಲಿಕೆ ಉಂಟು. ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ ಮಾತ್ರ ಪರಿಗಣಿಸಲಾಗುವುದು)
3. ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರಬೇಕು, (ಅಂಕಪಟ್ಟಿ ಲಗತ್ತಿಸಬೇಕು)
4. ಕಾರ್ಯಕರ್ತೆಗೆ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ಅದೇ ಗ್ರಾಮದವರಾಗಿದ್ದು, ತಹಶೀಲ್ದಾರರು/ಉಪತಹಶೀಲ್ದಾರರಿಂದ ಪಡೆದು ಮೂರು ವರ್ಷದೊಳಗಿನ ವಾಸಸ್ಥಳ ಧೃಡೀಕರಣ ಪತ್ರವನ್ನು ಲಗತ್ತಿಸಬೇಕು.
5. ಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರ ಇರುವ ಗ್ರಾಮದಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅದೇ ಅಂಗನವಾಡಿ ಕೇಂದ್ರದ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
6. ಮೀಸಲಾತಿ ನಿಗಧಿಪಡಿಸಿದ ಅಂಗನವಾಡಿ ಕೇಂದ್ರಗಳಿಗೆ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಲಗತ್ತಿಸಿರಬೇಕು.

**<u>ಆದ್ಯತೆ ಕೋರುವ ಅಭ್ಯರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು</u>**

7. ಅಂಗನವಾಡಿ ಕಾರ್ಯಕರ್ತೆಗೆ ಅರ್ಜಿ ಸಲ್ಲಿಸುವ ಮಹಿಳಾ ಅಭ್ಯರ್ಥಿಗಳು ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸುಧಾರಣಾ ಸಂಸ್ಥೆ/ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ/ಮಾಜಿ ನಿವಾಸಿಗಳಾಗಿದ್ದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸುವುದು.
8. ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸುವ ಮಹಿಳಾ ಅಭ್ಯರ್ಥಿಯು ವಿಧವೆ ಆದಲ್ಲಿ ಪತಿಯ ಮರಣ ಪ್ರಮಾಣ ಪತ್ರ ಲಗತ್ತಿಸಬೇಕು. (ವಿಧವಾ ವೇತನ ಧೃಡೀಕರಣ ಪತ್ರ ಅಥವಾ ಇನ್ಯಾವುದೇ ಧೃಡೀಕರಣವನ್ನು ಪರಿಗಣಿಸುವುದಿಲ್ಲ) ಹಾಗೂ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ (ಆತ್ಮಹತ್ಯೆ ಬಗ್ಗೆ ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸಬೇಕು) ಒಂದಕ್ಕಿಂತ ಹೆಚ್ಚು ವಿಧವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ಆತ್ಮ ಹತ್ಯ ಮಾಡಿಕೊಂಡ ರೈತ ವಿಧವ ಪತ್ನಿಗೆ ಅಧ್ಯಾತೆ ನೀಡಲಾಗುವುದು ಹಾಗೂ ವಿಧವೆಯರು ತಾವು ಪ್ರಸ್ತುತ ಎಲ್ಲೆ ವಾಸವಿರುವುದಾಗಿ ವಾಸಸ್ಥಳ ದೃಡೀಕರಣವನ್ನು ಸಲ್ಲಿಸಿರುತ್ತಾರೆ. ಆ ಸ್ಥಳವನ್ನೇ ವಾಸಸ್ಥಳವೆಂದು ಪರಿಗಣಿಸಲಾಗುವುದು
9. ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದಲ್ಲಿ ಸಂಬಂಧಿಸಿದ ಪ್ರಾಧಿಕಾರಿದಿಂದ ಪ್ರಮಾಣ ಪತ್ರವನ್ನು ಲಗತ್ತಿಸಿರಬೇಕು.
10. ವಿಕಲಚೇತನ ಅಭ್ಯರ್ಥಿಗಳು (ವೈದ್ಯಕೀಯ ಪ್ರಾಧಿಕಾರದಿಂದ ಪಡೆದ ದೈಹಿಕ ಅಂಗವಿಕಲತೆ ಪ್ರಮಾಣ ಪತ್ರವನ್ನು ಲಗತ್ತಿಸುವುದು. ಶೇ.40 ಕ್ಕಿಂತ ಕಡಿಮೆ ಹಾಗೂ ಶೇ.60 ಕ್ಕಿಂತ ಹೆಚ್ಚು ಇರುವ ಅಂಗವಿಕಲತೆಯ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಆಯ್ಕೆಯಾದಲ್ಲಿ ಅಂಗವಿಕಲತೆ ಪ್ರಮಾಣದ ಬಗ್ಗೆ ವೈದ್ಯಕೀಯ ಪ್ರಾಧಿಕಾರದ ಮುಂದೆ ಮತ್ತೊಮ್ಮೆ ಹಾಜರುಪಡಿಸಲಾಗುವುದು)

**<u>ಬೋನಸ್ ಅಂಕಗಳು:-</u>** (ಪ್ರತಿ ವಿನಾಯಿತಿಗೆ 5 ಅಂಕಗಳು)

11. ಮಾಜಿ ದೇವದಾಸಿಯರ ಮಕ್ಕಳು (ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ)
12. ಯೋಜನಾ ನಿರಾಶ್ರಿತರು (ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ)
13. ವಿಚ್ಛೇದನ ಪಡೆದ ಮಹಿಳೆ (ನ್ಯಾಯಾಲಯದಿಂದ ಪಡೆದಿರುವ ವಿಚ್ಛೇದನ ಪ್ರಮಾಣ ಪತ್ರ ಸಲ್ಲಿಸಬೇಕು)
14. ಪರಿತ್ಯಕ್ತೆ (ಗ್ರಾಮ ಪಂಚಾಯಿತಿಯಿಂದ ಪಡೆದ ಪ್ರಮಾಣ ಪತ್ರ)

**<u>ಸಹಾಯಕಿ ಹುದ್ದೆಗೆ ಆನ್ ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು:-</u>**

1. ಅರ್ಜಿ ನಿಗಧಿತ ನಮೂನೆಯಲ್ಲಿ. (ಆನ್‌ಲೈನ್‌ನಲ್ಲಿ)
2. ವಯೋಮಿತಿ 18 ರಿಂದ 35 ವರ್ಷ (ಈ ಅಧಿಸೂಚನೆಯ ಕೊನೆಯ ದಿನಾಂಕಕ್ಕೆ 35 ವರ್ಷ ಮೀರಿರಬಾರದು, ಹಾಗೂ ಅಂಕಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ ಮಾತ್ರ ಪರಿಗಣಿಸಲಾಗುವುದು)
3. ಅಂಗನವಾಡಿ ಸಹಾಯಕಿ ಹುದ್ದೆಗೆ ಕನಿಷ್ಠ 4ನೇ ತರಗತಿ ಉತ್ತೀರ್ಣರಾಗಿರಬೇಕು, ಗರಿಷ್ಠ 9ನೇ ತರಗತ್ತಿವರೆಗೆ ತೇರ್ಗಡೆಯಾಗಿರುಬೇಕು 9ನೇ ತರಗತಿಗಿಂತ ಹೆಚ್ಚು ವಿದ್ಯಾರ್ಥತೆ ಹೊಂದಿದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ಅಭ್ಯರ್ಥಿಗಳು ಅಂಕಪಟ್ಟಿ ಲಗತ್ತಿಸುವಾಗ ಗರಿಷ್ಠ ಮತ್ತು ಕನಿಷ್ಠ ಅಂಕಗಳನ್ನು ಹೊಂದಿವ ಅಂಕಪಟ್ಟಿಯನ್ನು ಲಗತ್ತಿಸಬೇಕು.(ಒಂದೇ ವಿದ್ಯಾರ್ಹತೆಯನ್ನು ಉಳ್ಳ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಅರ್ಜಿಸಲ್ಲಿಸಿದಲ್ಲಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು)
4. ಸಹಾಯಕಿಗೆ ಅರ್ಜಿಸಲ್ಲಿಸುವ ಅಭ್ಯರ್ಥಿಗಳು ಅದೇ ಗ್ರಾಮದವರಾಗಿದ್ದು, ತಹಶೀಲ್ದಾರರು/ಉಪತಹಶೀಲ್ದಾರರಿಂದ ಪಡೆದ ಮೂರು ವರ್ಷದೊಳಗಿನ ವಾಸಸ್ಥಳ ಧೃಡೀಕರಣ ಪತ್ರವನ್ನು ಲಗತ್ತಿಸಬೇಕು.
5. ಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರ ಇರುವ ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಖಾಲಿ ಇರುವ ಹುದ್ದೆಗೆ ಅದೇ ಅಂಗನವಾಡಿ ಕೇಂದ್ರದ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
6. ಮೀಸಲಾತಿ ನಿಗಧಿಪಡಿಸಿದ ಅಂಗನವಾಡಿ ಕೇಂದ್ರಗಳಿಗೆ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಲಗತ್ತಿಸಿರಬೇಕು.

**<u>ಆದ್ಯತೆ ಕೋರುವ ಅಭ್ಯರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು</u>**

7. ಅಂಗನವಾಡಿ ಸಹಾಯಕಿಗೆ ಅರ್ಜಿ ಸಲ್ಲಿಸುವ ಮಹಿಳಾ ಅಭ್ಯರ್ಥಿಗಳು ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸುಧಾರಣಾ ಸಂಸ್ಥೆ/ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ/ಮಾಜಿ ನಿವಾಸಿಗಳಾಗಿದ್ದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸುವುದು.
8. ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸುವ ಮಹಿಳಾ ಅಭ್ಯರ್ಥಿಯು ವಿಧವೆ ಆದಲ್ಲಿ ಪತಿಯ ಮರಣ ಪ್ರಮಾಣ ಪತ್ರ ಲಗತ್ತಿಸಬೇಕು. (ವಿಧವಾ ವೇತನ ಧೃಡೀಕರಣ ಪತ್ರ ಅಥವಾ ಇನ್ಯಾವುದೇ ಧೃಡೀಕರಣವನ್ನು ಪರಿಗಣಿಸುವುದಿಲ್ಲ) ಹಾಗೂ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ (ಆತ್ಮಹತ್ಯೆ ಬಗ್ಗೆ ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಲಗತ್ತಿಸಬೇಕು) ಒಂದಕ್ಕಿಂತ ಹೆಚ್ಚು ವಿಧವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಲ್ಲಿ ಆತ್ಮಹತ್ಯ ಮಾಡಿಕೊಂಡ ರೈತ ವಿಧವ ಪತ್ನಿಗೆ ಅಧ್ಯಾತೆ ನೀಡಲಾಗುವುದು ಹಾಗೂ ವಿಧವೆಯರು ತಾವು ಪ್ರಸ್ತುತ ಎಲ್ಲೆ ವಾಸವಿರುವುದಾಗಿ ವಾಸಸ್ಥಳ ದೃಡೀಕರಣವನ್ನು ಸಲ್ಲಿಸಿರುತ್ತಾರೆ. ಆ ಸ್ಥಳವನ್ನೇ ವಾಸಸ್ಥಳವೆಂದು ಪರಿಗಣಿಸಲಾಗುವುದು.(ತಾಯಿ ಮನೆ ಅಥಾವ ಗಂಡನಮನೆ)
9. ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಲಗತ್ತಿಸಿರಬೇಕು.
10. ಅಂಗನವಾಡಿ ಸಹಾಯಕಿ ಹುದ್ದೆಗೆ ವಿಕಲಚೇತನ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.

**<u>ಬೋನಸ್ ಅಂಕಗಳು:-</u>** (ಪ್ರತಿ ವಿನಾಯಿತಿಗೆ 5 ಅಂಕಗಳು)

11. ಮಾಜಿ ದೇವದಾಸಿಯರ ಮಕ್ಕಳು (ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ)
12. ಯೋಜನಾ ನಿರಾಶ್ರಿತರು (ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ)
13. ವಿಚ್ಛೇದನ ಪಡೆದ ಮಹಿಳೆ (ನ್ಯಾಯಾಲಯದಿಂದ ಪಡೆದಿರುವ ವಿಚ್ಛೇದನ ಪ್ರಮಾಣ ಪತ್ರ ಸಲ್ಲಿಸಬೇಕು)
14. ಪರಿತ್ಯಕ್ತೆ (ಗ್ರಾಮ ಪಂಚಾಯಿತಿಯಿಂದ ಪಡೆದ ಪ್ರಮಾಣ ಪತ್ರ)

➢ **<u>ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಆಯ್ಕೆ ಮಾಡಲು ಪ್ರಕಟಣೆ ಹೊರಡಿಸಿದ ನಂತರ ಅನಿವಾರ್ಯ ಸಂದರ್ಭದಲ್ಲಿ ರದ್ದುಗೊಳಿಸುವ ಅಧಿಕಾರ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಆಯ್ಕೆ ಸಮಿತಿ ರವರು ಹೊಂದಿರುತ್ತಾರೆ.</u>**

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಹಾಸನ.

# HELP DESK

## Contact for required details

| Sl.No | 8 Taluks | Phone No |
|---|---|---|
| 1 | Hassan | 08172-267223 |
| 2 | Channarayapatna | 08176-252365 |
| 3 | Holenarashipura | 08175-273307 |
| 4 | Belur | 08177-222269 |
| 5 | Sakaleshpura | 08173-244557 |
| 6 | Alur | 08170-218220 |
| 7 | Arsikere | 08174-233060 |
| 8 | Arakalgud | 08175-220124 |

**Deputy Director,**
**Department of Women & Child Development,**
**Hassan**

D:vin20-21:Aw/h/vacancy 3

## Anganwadi Worker vacancy post information

| l.No | Centre Name | Gram Panchayath/Ward Name | Reservation | Taluk Name | Remarks |
|---|---|---|---|---|---|
| 1 | Tumbaapura | Kaamasamudra | Others | Arasikere | – |
| 2 | Akkanahalli | Akkanahalli | Others | Channarayapatna | – |
| 3 | Thejigere (mini) | Kumbenahalli | Others | Channarayapatna | – |
| 4 | Kantirayapura (mini) | Dhammaningala | Others | Channarayapatna | – |
| 5 | Kasaranahalli (mini) | Mathighatta | Others | Channarayapatna | – |
| 6 | Gopanahalli | Heragu | Others | Hassan | – |
| 7 | Gowripura (mini) | Kabbali | Others | Hassan | – |

Deputy Director,
Women and Child Development Department,
Hassan.

## Anganwadi Helper vacancy post information

| | Centre Name | Gram Panchayath/Ward Name | Reservation | Taluk Name | Remarks |
|---|---|---|---|---|---|
| | Kadalamagge | K.Shankaranahalli | Others | Arasikere | – |
| | Halekallanayakanahalli | Jajuru | Sc | Arasikere | – |
| | Maladevihalli | Nerlige | Others | Arasikere | – |
| | Heghatta | Heghatta | Others | Arasikere | – |
| | Kudukundi | Chagachagere | Others | Arasikere | – |
| | Kavalikere | D.Kanagalu | Others | Alur | – |
| | Byaba Colony | Byrapura | Sc | Alur | – |
| | Bilaguli-1 | Ramanathapura | Others | Arakalagud | – |
| | Ankanahalli | Belavadi | Others | Arakalagud | – |
| 0 | Mundagodu | Katthimallenahalli | Others | Arakalagud | – |
| 1 | J.P.Nagara | Purasabhe | Others | Belur | – |
| 2 | Intitholalu | Kesagodu | Others | Belur | – |
| 3 | Chatachatanahalli | Chatachatanahalli | Others | Belur | – |
| 4 | Aandale | Aandale | Others | Belur | – |
| 5 | Gullenahalli | Mattanavile | Others | Channarayapatna | – |
| 6 | Jamburu Colony | Jamburu | Sc | Channarayapatna | – |
| 7 | Didaga | Didaga | Others | Channarayapatna | – |
| 8 | Badakanahalli | Gowdagere | Others | Channarayapatna | – |
| 9 | Madanapura | Kyamanahalli | Others | Sakaleshpura | – |
| 0 | Kyanahalli | Kyanahalli | Others | Sakaleshpura | – |
| 1 | Kamanahalli | Byakaravalli | Others | Sakaleshpura | – |
| 2 | Matasagara | Malali | Sc | Sakaleshpura | – |
| 3 | Dadadahalli | Shanthigrama | Others | Hassan | – |
| 4 | B.Katihalli | Katihalli | Others | Hassan | – |

Deputy Director,
Women and Child Development Department,
Hassan.